ವಿಚಾರಗಳನ್ನು ನಿಧಾನವಾಗಿ ಹೇಳಿದರೂ ಕೂಡ ಗಂಭೀರವಾಗಿ ಕೆಲವು charges ಆನ್ನು ಮಾಡಿದರು. ಅದಕ್ಕೆ ಯಾವ ಪ್ರತಿಕ್ರಿಯೆ ಇಲ್ಲ ಮತ್ತು ಹೇಳುವವರು ಕೇಳುವವರು ಯಾರು ಇಲ್ಲ. ಈಗ ಅವರು ಶಾಸಕರ ನಿಧಿಯ ಬಗ್ಗೆ ಹೇಳಿದರು. ಅದಕ್ಕೆ ಉತ್ತರ ಹೇಳುವವರೇ ಇಲ್ಲ ಅದರ ಬಗ್ಗೆ ಆಸಕ್ತಿಯನ್ನು ವಹಿಸತಕ್ಕಂಥವರು ಇಲ್ಲ. ಅದರ ಬಗ್ಗೆ ಉತ್ತರವನ್ನು ಕೊಡುವಾಗ ಅವರು ಉತ್ತರವನ್ನು ಪಡೆದುಕೊಳ್ಳಲಿ. ಮಾನ್ಯ ಅಧ್ಯಕ್ಷರೆ ನಾನು ಈಗಾಗಲೇ ತಮ್ಮ ಗಮನಕ್ಕೆ ಒಂದು ಪತ್ರವನ್ನು ಬರೆದು ಕೊಟ್ಟಿದ್ದೇನೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು.

ವಿಷಯ: ಬೆಂಗಳೂರು ಮತ್ತೆ ಅಹಮದಾಬಾದ್ ನಗರಗಳಲ್ಲಿ ಇತ್ತೀಚೆಗೆ ಆದ ಬಾಂಬ್ ಸ್ಫೋಟದ ಬಗ್ಗೆ ಕಾಂಗ್ರೆಸ್ ನಡೆಸಿದ ಪಿತೂರಿ ಎಂದು ಬಣ್ಣಿಸಿರುವ ಬಗ್ಗೆ

ಅಧ್ಯಕ್ಷರು: ಅದನ್ನು ಈಗಲೇ ಹೇಳುತ್ತೀರೋ ಅಥವಾ ನಾಳೆ ದಿವಸ ಪ್ರಸ್ತಾಪವನ್ನು ಮಾಡುತ್ತಿರೋ? ಏಕೆಂದರೆ ಈ ದಿನ ಬಜೆಟ್ ಚರ್ಚೆ continue ಆಗಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ನಾಳೆ ಮುಂಜಾನೆ ಅದನ್ನೆ ಚರ್ಚೆಗೆ ಕೊಡುತ್ತೇನೆಂದರೆ ನಾಳೆಯೇ ತೆಗೆದುಕೊಳ್ಳುತ್ತೇನೆ, ನನ್ನದೇನು ಇಲ್ಲ, ನಿಮ್ಮ ಮೇಲೆ ಇರುವುದು.

ಅಧ್ಯಕ್ಷರು: ರಿಪ್ಲೈ ಆದ ಮೇಲೆ ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾಳೆ ರಿಪ್ಲೈ ಆದ ಮೇಲೆ ನನಗೆ ಗೊತ್ತಿದೆ ಏನು ಎನ್ನುವುದು. ಯಾವುದೋ ಒಂದು ಕಾರಣವನ್ನು ತೆಗೆದು ಅಡ್ಜರ್ನ್ ಮಾಡಿ ಹೋದರೆ ಆಮೇಲೆ..

ಅಧ್ಯಕ್ಷರು: ನೀವು ಈಗಲೇ ಅಡ್ವಾನ್ಸಾಗಿ ಹೇಳುತ್ತಿದ್ದೀರಿ ಏನು?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದಕ್ಕೆ ತಾವು ಉತ್ತರವನ್ನು ಕೊಡಿಸತಕ್ಕಂಥದ್ದು ಒಂದು. sorry, ಅದರ ಮೇಲೆ ತಮ್ಮ ರೂಲಿಂಗ್ ಕೊಡತಕ್ಕಂಥದ್ದು ಒಂದು ಬಾಕಿ ಇದೆ ಆ ರೂಲಿಂಗ್ ಬೇಕು. ಏಕೆಂದರೆ ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು: ನಾನು ರೂಲಿಂಗ್ ಆನ್ನು ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡತಕ್ಕಂಥ ಈ ಪ್ರಮೇಯು ಏಕೆ ಬಂತು ಎಂದರೆ, ನಿಜವಾಗಲೂ ನೋಟಿಸ್ ಕೊಟ್ಟೆ ಮಾತನಾಡಬೇಕು ಎನ್ನತಕ್ಕಂಥ ಒಂದು ಪದ್ಧತಿ ಇದ್ದ ಕಾರಣ ನೋಟಿಸ್ ಕೊಟ್ಟಿದ್ದೇನೆ. ಅದಕ್ಕಾಗಿ ದಯವಿಟ್ಟು ಭಾರತೀಯ ಜನತಾ ಪಾರ್ಟಿಯ ನಾಯಕಿಯಾದ ಶ್ರೀಮತಿ ಸುಷ್ಮಾ ಸ್ವರಾಜ್‌ರವರು ನವದೆಹಲಿಯಲ್ಲಿ ನಿನ್ನೇ ನಡೆದ ಪತ್ರಿಕಾಗೋಷ್ಠಿಯಲ್ಲಿ ಬೆಂಗಳೂರು ಮತ್ತು ಅಹಮದಾಬಾದ್ ನಗರಗಳಲ್ಲಿ ಇತ್ತೀಚೆಗೆ ಆದ ಬಾಂಬ್‌ಸ್ಫೋಟದ ಬಗ್ಗೆ ಮಾತನಾಡುತ್ತಾ ಸಂಸತ್ತಿನಲ್ಲಿ ನಡೆದ ವಿಶ್ವಾಸ ಮತದ

ಸಂದರ್ಭದಲ್ಲಿ ಹಣವನ್ನು ನೀಡಲಾಗಿದೆ ಎಂಬ ಆರೋಪದಿಂದ ಜನರ ಮನಸ್ಸನ್ನು ಬೇರೆ ಕಡೆಗೆ ಸೆಳೆಯಲು ಕಾಂಗ್ರೆಸ್ ನಡೆಸಿದ್ದ ಪಿತೂರಿ ಎಂದು ಬಣ್ಣಿಸಿದ್ದಾರೆ.

ಶ್ರೀ ಸಿದ್ದು ಸವದಿ: ಮಾನ್ಯ ಅಧ್ಯಕ್ಷರೆ, ಶ್ರೀಮತಿ ಸುಷ್ಮಾ ಸ್ವರಾಜ್‌ರವರು ಈ ಮನೆಯ ಸದಸ್ಯರು ಅಲ್ಲವಲ್ಲಾ. ಅವರು ಬಂದು ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, I am on a point of order.

ಶ್ರೀ ಸಿದ್ದು ಸವದಿ: ಅವರು ಈ ಮನೆಯ ಸದಸ್ಯರು ಅಲ್ಲದಿರುವುದರಿಂದ ಅವರು ಇಲ್ಲಿ ಬಂದು ಉತ್ತರವನ್ನು ಹೇಳುವುದಕ್ಕಾಗುವುದಿಲ್ಲ. ಅದಕ್ಕಾಗಿ ಅದು ಇಲ್ಲಿ ಚರ್ಚೆಗೆ ಬೇಡ.

(ಗೊಂದಲ)

ಅಧ್ಯಕ್ಷರು: ಶ್ರೀಮತಿ ಸುಷ್ಮಾ ಸ್ವರಾಜ್ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದು ಎಷ್ಟು ಸರಿ. ಸುಷ್ಮಾ ಸ್ವರಾಜ್‌ರವರ statement ಬಗ್ಗೆ ಲೋಕಸಭೆಯ ಸದಸ್ಯರು ಕೇಳಲಿ. ಅವರು ಈ ಸದನದ ಸದಸ್ಯರು ಅಲ್ಲ. ಇಲ್ಲಿ ಯಾರಾದರೂ ಮಂತ್ರಿಗಳು ಅಥವಾ ಮುಖ್ಯಮಂತ್ರಿಗಳು statement ಅನ್ನು ಕೊಟ್ಟಿದ್ದರೆ ಅದರ ಬಗ್ಗೆ ನೀವು ಪ್ರಸ್ತಾಪ ಮಾಡಬಹುದು. ಶ್ರೀಮತಿ ಸುಷ್ಮಾ ಸ್ವರಾಜ್‌ರವರ ಹೇಳಿಕೆಯನ್ನು ಇಲ್ಲಿ ಪ್ರಸ್ತಾಪ ಮಾಡುವಂಥದ್ದು ಅದರ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ನಾನು ಅವಕಾಶವನ್ನು ಕೊಡುವುದಿಲ್ಲ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ನೋಟಿಸ್ ಕೊಟ್ಟು ಮಾತನಾಡುತ್ತಿದ್ದೇನೆ. ಅದಕ್ಕಾಗಿ ಅವಕಾಶವನ್ನು ಕೊಡಬೇಕು.

ಶ್ರೀ ಕೆ.ಎಸ್.ಈಶ್ವರಪ್ಪ: ಅವರು ಈಗ ರೂಲಿಂಗ್ ಕೊಟ್ಟಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಸ್ವತ: ನಿಮ್ಮ ಆಫೀಸಿಗೆ ಬಂದು ನೋಟಿಸ್ ಕೊಟ್ಟಿದ್ದೇನೆ.

ಅಧ್ಯಕ್ಷರು: ಕೊಟ್ಟಿದ್ದೀರಿ, ಆದರೆ ಅದು.

(ಗೊಂದಲ)

ಮಾನ್ಯ ಖರ್ಗೆಯವರೆ, ನೀವು ರಾಜಕೀಯವಾಗಿ ಅದರ ಬಗ್ಗೆ ಪ್ರತಿ ಹೇಳಿಕೆಯನ್ನು ಕೊಡಿ ಅದು ನಿಮಗೆ ಬಿಟ್ಟಿರುವಂಥದ್ದು. ಸದನದಲ್ಲಿ ನೀವು ಶ್ರೀಮತಿ ಸುಷ್ಮಾ ಸ್ವರಾಜ್‌ರವರು ಹೇಳಿದ್ದಾರೋ ಬಿಟ್ಟಿದ್ದಾರೋ ಅದು ಅವರಿಗೆ ಬಿಟ್ಟಿರುವಂಥದ್ದು. ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನಾನು ಒಂದೇ ಒಂದು ವಿನಂತಿಯನ್ನು ಮಾಡಿಕೊಳ್ಳುವಂಥದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಶಾಂತವಾಗಿರತಕ್ಕಂಥ ಕರ್ನಾಟಕ ರಾಜ್ಯಕ್ಕೆ ಇವರು ಬೆಂಕಿ ಹಚ್ಚುವಂಥದ್ದನ್ನು....

(ಗೊಂದಲ)

ಅಧ್ಯಕ್ಷರು: ನಾನು ನಿಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುವಂಥದ್ದು ಶ್ರೀಮತಿ ಸುಷ್ಮಾ ಸ್ವರಾಜ್‌ರವರು ಯಾವ ರೀತಿಯ ಹೇಳಿಕೆಯನ್ನು ಕೊಟ್ಟಿದ್ದಾರೆ ಅದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಆ ಹೇಳಿಕೆ ಬಗ್ಗೆ ಇಲ್ಲಿ ಚರ್ಚೆ ಮಾಡುವುದು ಸರಿಯಲ್ಲ. ಅವರು ಈ ಸದನದ ಸದಸ್ಯರು ಅಲ್ಲ. ನಮ್ಮ ಸದನದ ಸದಸ್ಯರು ಯಾರಾದರೂ ಇದ್ದರೆ ನಾನು ಅವಕಾಶವನ್ನು ಕೊಡುತ್ತಿದ್ದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ ಒಂದು ನಿಮಿಷ. ಅವರು ಈ ಬಗ್ಗೆ ನೋಟೀಸ್ ಕೊಟ್ಟಿದ್ದಾರೆ. ಹೇಳುತ್ತೇನೆ ಕೇಳಿ.

ಅಧ್ಯಕ್ಷರು: ನೋಟಿಸ್ ಕೊಟ್ಟಿದ್ದಾರೆ, ನೀವು ಹೇಳಿ.

ಶ್ರೀ ಸಿದ್ದರಾಮಯ್ಯ: ಅವರೆಲ್ಲರಿಗೂ ಕುಳಿತುಕೊಳ್ಳುವುದಕ್ಕೆ ಹೇಳಿ.

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ನಾನು **point of order** ಅನ್ನು ಎತ್ತಿದ್ದೇನೆ.....

ಅಧ್ಯಕ್ಷರು: ಶ್ರೀಮತಿ ಸುಷ್ಮಾ ಸ್ವರಾಜ್‌ರವರು ಈ ಮನೆಯ ಸದಸ್ಯರಾ?

ಶ್ರೀ ಸಿದ್ದರಾಮಯ್ಯ: ಅವರು ಈ ಮನೆಯ ಸದಸ್ಯರು ಅಲ್ಲ.

ಅಧ್ಯಕ್ಷರು: ಹಾಗಾದರೆ ಅವರ ಹೇಳಿಕೆಯ ಬಗ್ಗೆ ಏಕೆ ಚರ್ಚೆ ಮಾಡಬೇಕು. ನಾಳೆ ಇನ್ನೊಬ್ಬರು ರಾಷ್ಟ್ರೀಯ ನಾಯಕರು ಹೇಳುತ್ತಾರೆ. ನೋಟಿಸ್ ಅನ್ನು ಕೊಟ್ಟು ಚರ್ಚೆ ಮಾಡುವುದಕ್ಕೆ ಆಗುತ್ತದೆಯೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅವರು ಕರ್ನಾಟಕದ ಬಗ್ಗೆ...

ಶ್ರೀ ಕೆ.ಎಸ್.ಈಶ್ವರಪ್ಪ: ಅದರ ಬಗ್ಗೆ ಮತ್ತೇ ಮತ್ತೇ ಹೇಳುವ ಅವಶ್ಯಕತೆ ಇಲ್ಲ.

ಅಧ್ಯಕ್ಷರು: ಅದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆಯೇ? ಮಾನ್ಯ ಸಿದ್ದರಾಮಯ್ಯನವರೆ? ಅವರು ರಾಷ್ಟ್ರೀಯ ನಾಯಕರು ಇರಬಹುದು ಆ ಬಗ್ಗೆ ನೀವು ರಾಜಕೀಯವಾಗಿ ಉತ್ತರವನ್ನು ಕೊಡಿ.

(ಗೊಂದಲ)

No, No ಅವರ ಹೇಳಿಕೆ ಸರಿಯೋ ತಪ್ಪೋ ನಾನು ಏನೂ ಹೇಳುವುದಿಲ್ಲ. ಆದರೆ ಅವರು ಈ ಸದನದ ಸದಸ್ಯರು ಅಲ್ಲ. ಹಾಗಾಗಿ ಅವರ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ.

ಒಬ್ಬ ಮಾನ್ಯ ಸದಸ್ಯರು: ಹಾಗಾದರೆ ಈ ಸದನದ ಗೌರವವನ್ನು ತೆಗೆಯಬಗುದೇ?

ಅಧ್ಯಕ್ಷರು: ಅಲ್ಲಿ ಈ ಸದನದ ಗೌರವವನ್ನು ತೆಗೆದಿರುವುದಿಲ್ಲ. ಅವರು ಈ ಸದನದ ಬಗ್ಗೆ ಏನೂ ಮಾತನಾಡಿಲ್ಲ, ಬೇಕಾದರೆ ನೋಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: There is a conspiracy behind this ಎಂದು ಮಾನ್ಯ ಯಡಿಯೂರಪ್ಪನವರು ಹೇಳಿದರು.

ಅಧ್ಯಕ್ಷರು: ನೀವು ಅದರ ಬಗ್ಗೆ ಚರ್ಚೆ ಮಾಡಿ ಅದರ ಬಗ್ಗೆ ಮಾತನಾಡಿ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ: ಬೇಕಾದರೆ ರಾಜ್ಯಸಭೆಯಲ್ಲಿ ಹೋಗಿ ಮಾತನಾಡಿ. ಅವರು ಈ ಮನೆಯ ಸದಸ್ಯರು ಅಲ್ಲ. ಅಲ್ಲಿ ಹೋಗಿ ಮಾತನಾಡಿ ಇಲ್ಲಿ ಏಕೆ ಮಾತನಾಡುತ್ತೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಎಲ್ಲಿಯವರೆಗೆ ಹೋಗಿದ್ದಾರೆಂದರೆ,

ಅಧ್ಯಕ್ಷರು: No, No ಅವರು ಈ ಸದನದ ಸದಸ್ಯರು ಅಲ್ಲ. ನಾನು ಈಗಾಗಲೇ ಹೇಳಿದ್ದೇನೆ. ಈ ವಿಷಯದ ಬಗ್ಗೆ ನಾನು ಯಾವುದನ್ನು ರೆಕಾರ್ಡಿಗೆ ತೆಗೆದುಕೊಳ್ಳುವುದಿಲ್ಲ, ಯಾವುದು ಕೂಡ ರೆಕಾರ್ಡಿಗೆ ಹೋಗುವುದಿಲ್ಲ. ಈ ಸದನದ ಸದಸ್ಯರು ಅಲ್ಲದವರ ಬಗ್ಗೆ ಅವರ ಹೇಳಿಕೆಯ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡುವ ಅವಶ್ಯಕತೆ ಇಲ್ಲ.

(ಗೊಂದಲ)

ನೀವು ರಾಜಕೀಯವಾಗಿ ಉತ್ತರವನ್ನು ಕೊಡಿ. ಇದು ಉತ್ತರ ಕೊಡುವ ವೇದಿಕೆಯಾಗುವುದು ಬೇಡ. ಈ ವಿಷಯದ ಬಗ್ಗೆ ಯಾವುದು ರೆಕಾರ್ಡ್‌ಗೆ ಹೋಗುವುದು ನಾನು ಈಗಾಗಲೇ ಹೇಳಿದ್ದೇನೆ. ಮಾನ್ಯ ಸಿದ್ದರಾಮಯ್ಯನವರೆ, ತಾವು ಅನುಭವ ಇದ್ದಂಥವರು. ಇವತ್ತು ಪಾರ್ಲಿಮೆಂಟ್‌ನಲ್ಲಿ ಹಣ ಕೊಟ್ಟಿರುವ ಬಗ್ಗೆ. ಅವರು ಹೇಳಿಕೆ ಕೊಟ್ಟಿರತಕ್ಕಂಥದ್ದರ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡಬಹುದೆ? ಮತ್ತೊಬ್ಬ ರಾಷ್ಟ್ರೀಯ ಪಕ್ಷದ ನಾಯಕರು ಅಥವಾ ನಿಮ್ಮ ಪಕ್ಷದ ರಾಷ್ಟ್ರೀಯ ನಾಯಕರು ಒಂದು ಹೇಳಿಕೆ ಕೊಡುತ್ತಾರೆ ಅದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಆಗುತ್ತದೆಯೇ? ಒಂದೊಂದು ರಾಜಕೀಯ ಪಕ್ಷದ ನಾಯಕರು ಬೇರೆ ಬೇರೆ ವಿಷಯಗಳ ಬಗ್ಗೆ ಮಾತನಾಡುತ್ತಾರೆ. ಅದನ್ನೆಲ್ಲಾ ಇಲ್ಲಿ ನಾವು ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಕಾಂಗ್ರೆಸ್ ಪಕ್ಷದಿಂದ ಅದಕ್ಕೆ ರಾಜಕೀಯವಾಗಿ ಉತ್ತರ ಕೊಡಿ. ಆದರೆ, ಅದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಈ ಸದನ ವೇದಿಕೆ ಅಲ್ಲ. ಸದನದ ಸದಸ್ಯರ ಬಗ್ಗೆ ಮತ್ತು ಅವರ ಹೇಳಿಕೆ ಬಗ್ಗೆ ಹಾಗೂ ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆ ಬಗ್ಗೆ ಚರ್ಚೆ ಮಾಡುವುದಾದರೆ ನಾನು ನಿಮಗೆ ರಕ್ಷಣೆ ಕೊಡುತ್ತೇನೆ. ಒಬ್ಬ ರಾಷ್ಟ್ರೀಯ

ಪಕ್ಷದ ನಾಯಕರು ಯಾವುದಾದರು ಹೇಳಿಕೆ ಕೊಟ್ಟರೆ ಅದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ ಇದು ನಮ್ಮ ಸದನಕ್ಕೆ ಸಂಬಂಧ ಇಲ್ಲ. ನಮ್ಮ ಸದನದಲ್ಲಿ ಚರ್ಚೆ ಮಾಡುವುದಕ್ಕೆ ವೇದಿಕೆಯನ್ನಾಗಿ ಮಾಡಿ ಕೊಡುವುದಿಲ್ಲ. ಈ ವಿಷಯದ ಬಗ್ಗೆ ತಾವುಗಳು ಮಾತನಾಡತಕ್ಕಂಥ ವಿಷಯ ಯಾವುದೂ ಕೂಡ ರೆಕಾರ್ಡ್‌ಗೆ ಹೋಗುವುದಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರೆ, ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ. ಸುಷ್ಮಾ ಸ್ವರಾಜ್‌ರವರ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡತಕ್ಕಂಥದು ಸರಿಯಲ್ಲ. ಒಂದು ರಾಷ್ಟ್ರೀಯ ಪಕ್ಷದ ನಾಯಕರು ಹೊರಗಡೆ ಏನು ಹೇಳಿಕೆ ಕೊಡುತ್ತಾರೆಯೋ ಅದಕ್ಕೆ ನೀವೊಂದು ರಾಷ್ಟ್ರೀಯ ಪಕ್ಷದ ನಾಯಕರಾಗಿ ಕೌಂಟರ್ ಸ್ಟೇಟ್‌ಮೆಂಟ್ ಅನ್ನು ಕೊಡಿ. ರಾಜಕೀಯವಾಗಿಯೇ ಅದಕ್ಕೆ ನೀವು ಉತ್ತರ ಕೊಡಿ. ಸದನದ ಮುಖಾಂತರ ಅದಕ್ಕೆ ಉತ್ತರ ಕೊಡತಕ್ಕಂಥ ಅವಶ್ಯಕತೆ ಇಲ್ಲ. ಈ ಸದನದಲ್ಲಿರತಕ್ಕಂಥ ಯಾರಾದರು ಸಚಿವರು ಅಥವಾ ಮುಖ್ಯ ಮಂತ್ರಿಗಳು ಹೇಳಿಕೆ ಕೊಟ್ಟಿದ್ದರೆ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ಪೂರ್ಣ ಅವಕಾಶ ಕೊಡುತ್ತೇನೆ. ಮಾನ್ಯ ಸಿದ್ದರಾಮಯ್ಯನವರೆ, ನಾಳೆ ದಿವಸ ಇನ್ನೊಂದು ಪಕ್ಷದ ನಾಯಕರು ಒಂದು ಹೇಳಿಕೆಯನ್ನು ಕೊಡುತ್ತಾರೆ ಅದನ್ನು ನಾವು ಇಲ್ಲಿ ಚರ್ಚೆ ಮಾಡುವುದಕ್ಕೆ ಆಗುತ್ತದೆಯೇ? ನಿನ್ನೆದಿವಸ ಇಲ್ಲಿ ಮಾಜಿ ಪ್ರಧಾನ ಮಂತ್ರಿಗಳ ಬಗ್ಗೆ ಒಂದು ಹೇಳಿಕೆ ಬಂತು. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಇಲ್ಲಿ ಆಗುತ್ತದೆಯೇ? ನೀವು ರಾಜಕೀಯವಾಗಿ ಅದಕ್ಕೆ ಕೌಂಟರ್ ಮಾಡಿ. ಆದರೆ, ಅದರ ಬಗ್ಗೆ ಚರ್ಚೆ ಮಾಡಲು ಇದು ವೇದಿಕೆ ಅಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ, ತಾವು ಕಾಂಗ್ರೆಸ್ ಪಕ್ಷದ ಅಧ್ಯಕ್ಷರು. ಈ ವಿಷಯದ ಬಗ್ಗೆ ನನ್ನ ಗಮನಕ್ಕೆ ತಂದಿದ್ದೀರಿ. ಮೇಲ್ನೋಟಕ್ಕೆ ನೋಡಿದರೆ ಇದರ ಬಗ್ಗೆ ಗೊತ್ತಾಗುತ್ತದೆ. ಅದನ್ನು ನಾನು ಅಡ್ಮಿಟ್ ಮಾಡಿಕೊಳ್ಳುವುದಿಲ್ಲ. ಈ ಸದನದಲ್ಲಿ ಇದರ ಬಗ್ಗೆ ಚರ್ಚೆ ಮಾಡುವುದು ಬೇಡ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ, I am requesting you. ಏಕೆಂದರೆ, ಒಂದೊಂದು ರಾಜಕೀಯ ಪಕ್ಷದ ನಾಯಕರು ದಿನನಿತ್ಯ ಒಂದೊಂದು ರೀತಿಯಲ್ಲಿ ಹೇಳಿಕೆ ಕೊಡುತ್ತಾರೆ. ಆದರೆ, ಅವೆಲ್ಲದರ ಬಗ್ಗೆ ಈ ಸದನದಲ್ಲಿ ಪ್ರಸ್ತಾಪ ಮಾಡಿ ಅದರ ಬಗ್ಗೆ ಚರ್ಚೆ ಮಾಡತಕ್ಕಂಥದ್ದು ಅವಶ್ಯಕತೆ ಇಲ್ಲ. ನೋಟೀಸ್ ಕೊಟ್ಟಿದ್ದಾರೆ. ಆದರೆ, ಅದು ಸರಿಯಲ್ಲವೆಂದು ನಾನು ಒಬ್ಬ ಸ್ಪೀಕರ್ ಆಗಿ ಹೇಳುತ್ತಿದ್ದೇನೆ. ನೀವು ನೋಟೀಸ್ ಕೊಟ್ಟು. ನನ್ನ ಗಮನಕ್ಕೆ ತಂದಿದ್ದೀರಿ. ಮತ್ತೆ ಕೇಳಿಕೊಂಡಿದ್ದೀರಿ. ಆದರೆ, ಈ ಸದನದಲ್ಲಿ ಆ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಆಗುವುದಿಲ್ಲ. ಮತ್ತೆ ಇಲ್ಲಿ ಪ್ರಸ್ತಾಪ ಮಾಡತಕ್ಕಂಥ ವಿಷಯವಲ್ಲ. ನೀವು ಅನುಭವಿಗಳಾಗಿದ್ದೀರಿ. ಈ

ಸದನದಲ್ಲಿನ ಕಾರ್ಯಕಲಾಪಗಳನ್ನು ತಾವು ನೋಡಿದ್ದೀರಿ. ಅದಕ್ಕೆ ನೀವು ಬೇಕಾದರೆ ರಾಜಕೀಯವಾಗಿ ಕೌಂಟರ್ ಮಾಡಿ. ಈ ಸದನದಲ್ಲಿ ಚರ್ಚೆ ಮಾಡುವುದು ಬೇಡ. ನೀವು ಬೇರೆ ವೇದಿಕೆಯಲ್ಲಿ ಚರ್ಚೆ ಮಾಡಿ. ಹೊರಗಡೆ ಮಾಡಿ ಹೋರಾಟ ಮಾಡಿ ಯಾರು ಬೇಡವೆಂದು ಹೇಳುತ್ತಾರೆ? ಈ ಸದನದಲ್ಲಿ ಹೋರಾಟ ಮಾಡುವುದಕ್ಕೆ ಇದು ವೇದಿಕೆ ಅಲ್ಲ. ಸರಿಯೋ ಅಥವಾ ತಪ್ಪೋ ಎಂಬುದನ್ನು ನೀವು ಸಾರ್ವಜನಿಕರಿಗೆ ಬಿಡಿ. ಮತ್ತೆ ರಾಜಕೀಯವಾಗಿ ಕೌಂಟರ್ ಮಾಡಿ. ಆದರೆ, ಈ ಸದನದಲ್ಲಿ ಬೇಡವೆಂದು ನಾನು ಹೇಳುತ್ತಿದ್ದೇನೆ. ತಾವು ಅನುಭವಿ ಇದ್ದಂಥ ವ್ಯಕ್ತಿಗಳು, ನಾನು ಹೆಚ್ಚಿಗೆ ಏನು ಮಾತನಾಡುವುದಿಲ್ಲ. ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ. ಇನ್ನು ನಿಮಗೆ ಬಿಟ್ಟ ವಿಚಾರ. ಮಾನ್ಯ ವಿರೋಧ ಪಕ್ಷದ ನಾಯಕರೆ, ನನ್ನ ಅಭಿಪ್ರಾಯದ ಬಗ್ಗೆ ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ. ಸಿದ್ದರಾಮಯ್ಯನವರೆ, ಅವರು ಈ ಸದನದ ಸದಸ್ಯರಲ್ಲ. ಅವರು ಒಂದು ಹೇಳಿಕೆಯನ್ನು ಹೊರಗಡೆ ಕೊಟ್ಟಿದ್ದಾರೆ. ಅದರ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ. ಇಲ್ಲಿರುವ ಯಾರಾದರೂ ಮುಖ್ಯಮಂತ್ರಿಗಳು, ಮಂತ್ರಿಗಳು ಹೇಳಿಕೆ ಕೊಟ್ಟಿದ್ದರೆ, ಅದರ ಬಗ್ಗೆ ಚರ್ಚೆ ಮಾಡಬಹುದು. ನಾನು ಇನ್ನೆಷ್ಟು ಸಲ ರೂಲಿಂಗ್ ಕೊಡಬೇಕು, ಹೇಳಿ?

ಶ್ರೀ ಕೆ.ಎಸ್.ಈಶ್ವರಪ್ಪ: ಅಧ್ಯಕ್ಷರ ರೂಲಿಂಗ್ ಬಗ್ಗೆ ಪ್ರಶ್ನಿಸುತ್ತಿದ್ದಾರೆ. ಅವರು ವಿರೋಧ ಪಕ್ಷದ ನಾಯಕರು, ಇವರು ಉಪ ಮುಖ್ಯಮಂತ್ರಿಗಳಾಗಿದ್ದಂತಹವರು....(ಗೊಂದಲ)

(ಗೊಂದಲ)

(ವಿರೋಧ ಪಕ್ಷದ ಮಾನ್ಯ ಸದಸ್ಯರುಗಳೆಲ್ಲರೂ ಮಾನ್ಯ ಸಭಾಧ್ಯಕ್ಷರ ಪೀಠದ ಬಳಿ ಬಂದು ಕೂಗುತ್ತಿದ್ದರು)

ಅಧ್ಯಕ್ಷರು: ಶೂನ್ಯ ವೇಳೆಯಲ್ಲಿ ಇದನ್ನು ಚರ್ಚೆ ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಬಜೆಟ್ ಬಗ್ಗೆ ಮಾತನಾಡುವವರು ಬಹಳಷ್ಟು ಸದಸ್ಯರಿದ್ದಾರೆ. ನೀವು ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಅಧ್ಯಕ್ಷರು: ಈಗ ಬಜೆಟ್ ವಿಷಯದ ಮೇಲೆ ಮಾತನಾಡೋಣ.

(ಗೊಂದಲ)

ಅಧ್ಯಕ್ಷರು: ಹೊರಗಡೆ ಇದರ ಬಗ್ಗೆ ನೀವು ರಾಜಕೀಯವಾಗಿ ಹೋರಾಟ ಮಾಡಿ. ಇಲ್ಲಿ ಏಕೆ ಅದನ್ನು ಮಾಡುತ್ತೀರಿ?

(ಗೊಂದಲ)

ಅಧ್ಯಕ್ಷರು: ಈಗ ಸದನವನ್ನು ಹತ್ತು ನಿಮಿಷಗಳವರೆಗೆ ಮುಂದಕ್ಕೆ ಹಾಕಿದ್ದೇನೆ.

(ಸದನವನ್ನು ಹತ್ತು ನಿಮಿಷಗಳವರೆಗೆ ಮುಂದೂಡಲಾಯಿತು)

(ಸದನವು ಮತ್ತೆ ಸಂಜೆ 6 ಗಂಟೆ 36 ನಿಮಿಷಕ್ಕೆ ಪುನರ್ ಸಮಾವೇಶಗೊಂಡಿತು. ಅಧ್ಯಕ್ಷ ಪೀಠದಲ್ಲಿ ಸಭಾಧ್ಯಕ್ಷರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಉಪಸ್ಥಿತರಿದ್ದರು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ(ವಿರೋಧ ಪಕ್ಷದ ನಾಯಕರು):–ಮಾನ್ಯ ಅಧ್ಯಕ್ಷರೆ, ಈಗಾಗಲೇ ಇನ್ನೊಂದು ಪತ್ರವನ್ನು ನಾನು ಈ ತಕ್ಷಣವೇ ತಮ್ಮ ಛೇಂಬರ್‌ಗೆ ಕಳುಹಿಸಿದ್ದೇನೆ ಮತ್ತು ನಾನು ಅದರ ಬಗ್ಗೆ ತಮಗೆ ಕೇಳಿಕೊಳ್ಳತಕ್ಕಂಥದ್ದು ಇಷ್ಟೆ, ನಾನು ಯಾರ ಹೆಸರನ್ನೂ ತೆಗೆದುಕೊಳ್ಳದೇ ಪ್ರಸ್ತಾಪ ಮಾಡುತ್ತೇನೆ, ಯಾವ ರೀತಿಯಾಗಿ ವ್ಯವಸ್ಥಿತ ಸಂಚನ್ನು ಕಾಂಗ್ರೆಸ್ ಪಕ್ಷದ ವಿರುದ್ಧವಾಗಿ...

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಅಧ್ಯಕ್ಷರೆ, ತಾವು ಈಗಾಗಲೇ ಮೂರು ಮೂರು ಬಾರಿ ರೂಲಿಂಗ್ ಕೊಟ್ಟಿದ್ದೀರಿ. ಒಂದು ಸಾರಿ ರೂಲಿಂಗ್ ಕೊಟ್ಟಮೇಲೆ ಆ ವಿಷಯವನ್ನು ಚರ್ಚೆ ಮಾಡಬಾರದು.

(ಗೊಂದಲ)

ಶ್ರೀ ಆರ್.ರೋಷನ್ ಬೇಗ್:–ಸ್ಪೀಕರ್ ಪರ್ಮಿಶನ್ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ:–ಮಾನ್ಯ ಅಧ್ಯಕ್ಷರೆ. ತಾವು ಈಗಾಗಲೇ ರೂಲಿಂಗ್ ಕೊಟ್ಟಾಗಿದೆ. ಆದಕಾರಣ ಅದರ ಮೇಲೆ ಮತ್ತೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ತಾವು ಅವಕಾಶವನ್ನು ಕೊಡಬಾರದು.

(ಗೊಂದಲ)

ಶ್ರೀ ಆರ್.ಅಶೋಕ್:–ಅಧ್ಯಕ್ಷರೆ ಒಂದು ಸಲ ರೂಲಿಂಗ್ ಕೊಟ್ಟ ಮೇಲೆ ಮತ್ತೆ ಚರ್ಚೆಗೆ ಅವಕಾಶ ಕೊಡಬಾರದು.

(ಗೊಂದಲ)

ಅಧ್ಯಕ್ಷರು:–ಈ ರೀತಿ ಎಲ್ಲರೂ ಒಟ್ಟಿಗೆ ಮಾತನಾಡಬೇಡಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀಕೆ.ಎಸ್.ಈಶ್ವರಪ್ಪ:–ಕಾಂಗ್ರೆಸ್‌ನವರು ಇಲ್ಲಿ ಸೋನಿಯಾಗಾಂಧಿಯವರನ್ನು ತೃಪ್ತಿಪಡಿಸುವಂಥ ಕೆಲಸ ಮಾಡಬೇಡಿ ಇವರು ಸೋನಿಯಾಗಾಂಧಿಯವರನ್ನು ತೃಪ್ತಿಪಡಿಸುವುದಕ್ಕೋಸ್ಕರ ಈ ಸದನ....

(ಗೊಂದಲ)

ಅಧ್ಯಕ್ಷರು:– ದಯವಿಟ್ಟು ನೀವೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ ದಯವಿಟ್ಟು ಒಂದು ನಿಮಿಷ, ದಯವಿಟ್ಟು ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಪ್ಲೀಸ್. ಪ್ಲೀಸ್.

(ಗೊಂದಲ)

ಅಧ್ಯಕ್ಷರು: ಮಾನ್ಯ ಈಶ್ವರಪ್ಪನವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಷಯದ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ನಾನು ಈಗಾಗಲೇ ಅದು ಬರುವುದಿಲ್ಲವೆಂದು ಹೇಳಿ ruling ಕೊಟ್ಟಿದ್ದೇನೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ನನಗೆ request ಮಾಡಿ ಒಂದು letter ಕಳುಹಿಸಿದ್ದಾರೆ. ಅವರು ಏನು request ಮಾಡುತ್ತಿದ್ದಾರೆ ಎಂದರೆ ನಿಮ್ಮ ruling ಅನ್ನು re consider ಮಾಡಿ review ಮಾಡಿ ಎಂದು ಕೇಳುತ್ತಿದ್ದಾರೆ. Review ಮಾಡುವ ವಿಚಾರದಲ್ಲಿ submission ಮಾಡುತ್ತೇನೆ ಎಂದು ಹೇಳುತ್ತಿದ್ದಾರೆ. ಅದರ ಬಗ್ಗೆ ನಾನು ತೀರ್ಮಾನ ತೆಗೆದುಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು: ಅದನ್ನು review ಮಾಡಬೇಕೋ, ಬೇಡವೋ.... ದಯವಿಟ್ಟು ಒಂದು ನಿಮಿಷ ಕುಳಿತುಕೊಳ್ಳಿ, please....

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ: ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಸ್ವಲ್ಪ ತಡೆಯಿರಿ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ: ಅವರು ಜೀರೋ ಅವರ್‌ನಲ್ಲಿ ಮಾತನಾಡುವುದಕ್ಕೆ ಅವಕಾಶ ಕೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಜೀರೋ ಅವರ್ ಎಂದರೆ ಏನು?

ಶ್ರೀ ಕೆ.ಎಸ್.ಈಶ್ವರಪ್ಪ: ಸ್ವಲ್ಪ ತಡೆಯಿರಿ ಸ್ವಾಮಿ, ಜೀರೋ ಅವರ್‌ನಲ್ಲಿ ಪ್ರಪಂಚದ ವಿಚಾರ ಏನು ಬೇಕಾದರೂ ಮಾತನಾಡಬಹುದು ಎಂದರೆ ಮಾತನಾಡಿ. ನಾನು ಹೇಳುತ್ತೇನಲ್ಲ, ಮಾತನಾಡಿ. ಆದರೆ ಶ್ರೀಮತಿ ಸುಷ್ಮಾ ಸ್ವರಾಜ್‌ರವರು

ರಾಜ್ಯಸಭಾ ಸದಸ್ಯರು. ಅವರು ಕೊಟ್ಟಿರತಕ್ಕಂಥ ಹೇಳಿಕೆಯನ್ನು ರಾಜ್ಯಸಭೆಯಲ್ಲಿ ಪ್ರಸ್ತಾಪ ಮಾಡಿ ಯಾರೂ ಬೇಕಾದರೂ ಮಾತನಾಡಲಿ, ಅವರಿಗೆ ಪೂರ್ಣ ಅಧಿಕಾರ ಇದೆ. ಶ್ರೀಮತಿ ಸುಷ್ಮಾಸ್ವರಾಜ್‌ರವರಿಗೆ ಉತ್ತರ ಕೊಡುವುದಕ್ಕೆ ಅಲ್ಲಿ ಅವಕಾಶ ಇದೆ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲಿ ಪ್ರಸ್ತಾಪ ಮಾಡಿ, ನಾನು KPCC ಅಧ್ಯಕ್ಷ, ಕಾಂಗ್ರೆಸ್ ಎನ್ನುವಂತಹ ವಿಚಾರ ಬಂದಿದೆ, ಅದಕ್ಕೋಸ್ಕರ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು ಎನ್ನುವುದು ನ್ಯಾಯವಲ್ಲ. ಇವರು KPCC ಅಧ್ಯಕ್ಷರಾಗಿ, ವಿರೋಧ ಪಕ್ಷದ ನಾಯಕರಾಗಿ, ಕಾಂಗ್ರೆಸ್ ಪಕ್ಷದ ಕಛೇರಿಯಲ್ಲಿ press meet ಮಾಡಿ ಇವರಿಗೆ ಏನೇನು ಬೇಕು ಅದನ್ನೆಲ್ಲ ಹೇಳಲಿ. ಆದರೆ ಈ ಸದನವನ್ನು ದುರುಪಯೋಗ ಮಾಡಿಕೊಳ್ಳುವುದು ಬೇಡ. ಇದು ರಾಜಕೀಯ ವೇದಿಕೆ ಆಗಕೂಡದು. ಒಮ್ಮೆ ಈ ಸದನದಲ್ಲಿ ಈ ರೀತಿಯಾಗಿ, ಯಾವ ವ್ಯಕ್ತಿ ಇಲ್ಲಿ ಸದನದಲ್ಲಿ ಉತ್ತರ ಕೊಡುವುದಕ್ಕೆ ಅವಕಾಶ ಇಲ್ಲವೋ ಅವರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಾದರೆ, ಇದು precedent ಆಗುತ್ತದೆ. ನಾಳೆ ಬೆಳಿಗ್ಗೆ ಬಂದು ನಾನು ಶ್ರೀಮತಿ ಸೋನಿಯಾ ಗಾಂಧಿ ಬಗ್ಗೆ ಕೊಡುತ್ತೇನೆ, ಆಗ ನೀವು ನನಗೂ ಅವಕಾಶವನ್ನು ಕೊಡಬೇಕಾಗುತ್ತದೆ.

(ಗೊಂದಲ)

ಅದಕ್ಕೆ ನಾನು ಹೇಳುತ್ತಿರುವುದು, ಈ ರೀತಿಯ precedent ಆಗಬಾರದು. ಸೋನಿಯಾ ಗಾಂಧಿ ಬಗ್ಗೆ ಪ್ರಸ್ತಾಪ ಮಾಡಿ ಎಂದು ನೀವು ಹೇಳಬಹುದು. ಆದರೆ ನೀತಿ ನಿಯವದ ಪ್ರಕಾರ ಹೇಳುವುದಾದರೆ ಶ್ರೀಮತಿ ಸೋನಿಯಾ ಗಾಂಧಿ ಬಂದು ಇಲ್ಲಿ ಉತ್ತರ ಕೊಡುವುದಕ್ಕಾಗುವುದಿಲ್ಲ. ಅವರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನನಗೆ ಅಧಿಕಾರ ಇಲ್ಲ. ಅದಕ್ಕೋಸ್ಕರ ನಾನು ಹೇಳುವುದಕ್ಕೆ ಇಷ್ಟಪಡುವುದೇನೆಂದರೆ, ಅವರು ಏಳರಿಂದ ಎಂಟು ಬಾರಿ ಗೆದ್ದವರು. ನಾನು ಅವರಿಗೆ ಮನವಿ ಮಾಡುತ್ತೇನೆ, ಯಾವ ವ್ಯಕ್ತಿ ಈ ಸದನದಲ್ಲಿ ಇಲ್ಲ, ಅವರ ಬಗ್ಗೆ ಇಲ್ಲಿ ಪತ್ರಿಕಾ ಹೇಳಿಕೆ ಇಟ್ಟುಕೊಂಡು, ಅದರ ಮುಖಾಂತರ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಯಾವುದೇ ಕಾರಣಕ್ಕೂ ಅವಕಾಶ ಕೊಡಬೇಡಿ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನನ್ನದೊಂದು request ಇದೆ. ತಾವು ನನಗೆ ಒಂದು review application ಕೊಟ್ಟಿದ್ದೀರಿ. ಆದರೆ ಈ ಸದನದ ಸದಸ್ಯರಲ್ಲದಿರುವವರು ನೀಡಿರುವ statement ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಬರುತ್ತದೋ ಇಲ್ಲವೋ ಎನ್ನುವ ಬಗ್ಗೆ ಅಷ್ಟೇ ಸ್ಪಷ್ಟೀಕರಣ ಮಾಡಿ. ಉಳಿದಂತಹ statement ಏನೂ ಬೇಡ. ಮಾನ್ಯ ಬಚ್ಚೇಗೌಡರೇ ಅವರು ಹೇಳಲಿ.

(ಗೊಂದಲ)

ಅಧ್ಯಕ್ಷರು: ಒಂದು ನಿಮಿಷ ಬಚ್ಚೇಗೌಡರೇ ಅವರು ಹೇಳಲಿ. ಅವರು ಹೇಳಿದ ಮೇಲೆ ತಾವು ಹೇಳಿ. ಈಗ ನಾನು ವಿರೋಧ ಪಕ್ಷದ ನಾಯಕರಿಗೆ ಏನು question ಕೇಳಿದ್ದೇನೆಂದರೆ, ಈ ಸದನದ ಸದಸ್ಯರಾಗಿಲ್ಲದೆ ಇರುವವರು, ಅವರು ಹೊರಗಡೆ ಏನು ಒಂದು statement ಕೊಟ್ಟಿದ್ದಾರೆ, ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಬರುತ್ತದೋ ಇಲ್ಲವೋ ಎನ್ನುವುದಕ್ಕೆ ಅಷ್ಟೇ ಉತ್ತರ ಕೊಡಲಿ. ಉಳಿದಂತಹ statement ಬೇಡ. ನಾನು ruling ಕೊಟ್ಟಿದ್ದೇನೆ. ಅವರು ಕೇಳುತ್ತದ್ದಾರೆ. ಅವರು ಏನು ಕೇಳುತ್ತಿದ್ದಾರೆಂದರೆ ನಿಮ್ಮ ರೂಲಿಂಗ್ review ಮಾಡಿ ಎಂದು ಕೊಟ್ಟಿದ್ದಾರೆ, ನಾನು ತೀರ್ಮಾನಕೊಡುತ್ತೇನೆ. ಅದರ ಬಗ್ಗೆ specific ಆಗಿ ಹೇಳಿ.

(ಗೊಂದಲ)

ಅಧ್ಯಕ್ಷರು: ನರೇಂದ್ರ ಬಾಬುರವರೇ, ಒಂದು ನಿಮಿಷ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ.

ಶ್ರೀ ನೆ.ಲ.ನರೇಂದ್ರಬಾಬು: ಯಾರು ಅಲ್ಲಿ ಬಾಂಬು ಹಾಕಿರುವುದು ಅಂತ ಹೇಳಿ.....

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನಾನು ತಮ್ಮನ್ನು ಭೇಟಿ ಮಾಡಿ, ಒಂದು ಪಕ್ಷದ ಮುಖಂಡರು ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ್ದಾರೆ, ಅದರಲ್ಲಿ ಇತ್ತೀಚೆಗೆ ನಡೆದಂತಹ ಬಾಂಬ್ ಸ್ಫೋಟದ ಘಟನೆ ಬಗ್ಗೆ, ಅದರಲ್ಲೂ ವಿಶೇಷವಾಗಿ ಬೆಂಗಳೂರು ಮತ್ತು ಅಹಮದಾಬಾದ್ ಬಗ್ಗೆ ನಮೂದಿಸಿ ಹೇಳಿ, ಅದರ ಹಿಂದೆ ಕಾಂಗ್ರೆಸ್ ಪಕ್ಷದ ಕೈವಾಡ ಇದೆ ಮತ್ತು ಇದನ್ನು ಮುಸ್ಲಿಮರ ಓಟು ಒಲಿಸಿಕೊಳ್ಳುವುದಕ್ಕೆ.....

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ನೋಡಿ ಮತ್ತೇ ಹೇಳುತ್ತಿದ್ದಾರೆ, ಇದು ಸರಿಯಾಗುವುದಿಲ್ಲ.....

(ಗೊಂದಲ)

ಅಧ್ಯಕ್ಷರು: ಸ್ಪಷ್ಟೀಕರಣ ಎಂದರೆ, ಆ statement ಬಗ್ಗೆ ಇಲ್ಲಿ ಮಾಡುವುದಕ್ಕೆ ಬರುತ್ತದೋ ಇಲ್ಲವೋ ಎನ್ನುವ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ನಾನು ಸೀಮಿತವಾಗಿ ಹೇಳಿದ್ದು, ಈಗ review application ಕೊಟ್ಟಿದ್ದೀರಿ....

(ಗೊಂದಲ)

ಅಧ್ಯಕ್ಷರು: ನಾನು ರೂಲಿಂಗ್ ಕೊಟ್ಟುಬಿಟ್ಟಿದ್ದೇನೆ. ಸದನದ ಹೊರಗಿನ ಸದಸ್ಯರು, ಸದನದಲ್ಲಿ ಇಲ್ಲದೇ ಇರುವಂತಹ ಸದಸ್ಯರ ಹೇಳಿಕೆಯನ್ನು ಇಲ್ಲಿ ಚರ್ಚೆ

ಮಾಡಬಹುದೋ ಮಾಡಬಾರದೋ ಎನ್ನುವುದನ್ನು ತಾವು ಹೇಳಬೇಕಾಗಿದೆ. ಅದರ ಬಗ್ಗೆ specific ಆಗಿ ಹೇಳಿ. ಅಷ್ಟಕ್ಕೆ ಮಾತ್ರ ನಾನು ಮಾತನಾಡಿ ಎಂದು ಹೇಳಿದ್ದು. ಉಳಿದ facts ಏನಿದೆ ಅದರ ವಿಚಾರ ಏನೂ ಹೇಳುವುದು ಬೇಕಾಗಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ: ದಯವಿಟ್ಟು ಸದನವನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡಬೇಡಿ ಎಂದು ನಾನು ತಮಗೆ ಮನವಿಯನ್ನು ಮಾಡುತ್ತೇನೆ. ಯಾವ ಕಾರಣಕ್ಕೂ ಈ ಸದನವನ್ನು ದುರುಪಯೋಗವಾಗುವುದಕ್ಕೆ ಅವಕಾಶ ಮಾಡಬೇಡಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಕಾಂಗ್ರೆಸ್ ಪಕ್ಷದ ತೇಜೋವಧೆ ಮಾಡತಕ್ಕಂಥ ದೃಷ್ಟಿಯಿಂದ ಈ ಹೇಳಿಕೆ ಸಾರ್ವಜನಿಕರಲ್ಲಿ ಕಾಂಗ್ರೆಸ್ ಪಕ್ಷದ ಬಗ್ಗೆ ಸಂದೇಹ ಹಾಗೂ ತಪ್ಪು ಅಭಿಪ್ರಾಯ ಮೂಡುವ ಅಪಾಯವಿದೆ. ಆದುದರಿಂದ, ತಾವು ತಮ್ಮ ರೂಲಿಂಗ್ ಅನ್ನು ಪುನರ್ ಪರಿಶೀಲಿಸಿ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ಮಾಡಿಕೊಡಬೇಕು ಎಂದು ಹೇಳಿ ನಾನು Rule under 363ನಲ್ಲಿ ಕೇಳುತ್ತಿದ್ದೇನೆ.

ಒಬ್ಬರು ಮಾನ್ಯ ಸದಸ್ಯರು: ಅಲ್ಪಸಂಖ್ಯಾತರ ಮತಗಳ ಮೇಲೆ ಕಣ್ಣಿಟ್ಟುಕೊಂಡು ಇವರು ಈ ರೀತಿ ಮಾತನಾಡುತ್ತಿದ್ದಾರೆ. ದಯವಿಟ್ಟು ಇದಕ್ಕೆ ಅವಕಾಶ ಕೊಡಬೇಡಿ. Parliamentನಲ್ಲಿ ಹಣ ತೆಗೆದುಕೊಂಡಿದ್ದಾರೆ,..... Parliament ನೋಟುಗಳ ಕಂತೆಯನ್ನು ಪ್ರದರ್ಶನ ಮಾಡಿದರು. ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ: ದಯವಿಟ್ಟು ತಾವು ruling ಕೊಡಬೇಡಿ, ಇದು ಸರಿಯಲ್ಲ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ನಾನು rule quote ಮಾಡಿ ಹೇಳುತ್ತಿದ್ದೇನೆ.

ಅಧ್ಯಕ್ಷರು: Rule quote ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ರೂಲ್ ಏನಿದೆ ಎಂದರೆ....

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೆ, ಅವರು rule quote ಮಾಡುತ್ತಿಲ್ಲ, ಅವರು ಮತ್ತೆ statement ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಅವರು ನೋಟಿಸ್ ಕೊಟ್ಟಿರುವುದು ಜೀರೋ ಅವರ್‌ನಲ್ಲಿ. ಜೀರೋ ಅವರ್‌ನಲ್ಲಿ ಅವರು ನೋಟಿಸ್ ಓದುವುದಕ್ಕೆ ಅಷ್ಟೇ ಅವಕಾಶ ಇದೆ, ಅದನ್ನು ಆಗಲೇ ಓದಿಯಾಗಿದೆ. ಆದುದರಿಂದ ಅದನ್ನು ಅವರು ಮತ್ತೇ ಬೇರೆ ರೂಪದಲ್ಲಿ ತರಲಿ. ಜೀರೋ ಅವರ್‌ನಲ್ಲಿ ಚರ್ಚೆಗೆ ಅವಕಾಶ ಇಲ್ಲ. ಅವರು ಹಿರಿಯ ನಾಯಕರಿದ್ದಾರೆ, ಸದನದ ಸದಸ್ಯರಿದ್ದಾರೆ. ಯಾವ ಸೆಕ್ಷನ್‌ನಲ್ಲಿ ನೋಟಿಸ್ ಕೊಟ್ಟಿದ್ದಾರೆ, ಅದಕ್ಕೆ ಅವಕಾಶ ಕೊಟ್ಟಿದ್ದೀರಿ, ಅದಕ್ಕೆ ತಾವು ruling ಕೊಟ್ಟಿದ್ದೀರಿ. ಈ ಸದನ ಮತ್ತು ನಿಮಗಿಂತ ದೊಡ್ಡವರಲ್ಲ ಅವರು.

(ಗೊಂದಲ)

ಅಧ್ಯಕ್ಷರು: ಅವರು rule quote ಮಾಡಿತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ: ನನಗೆ ಪರ್‌ಮಿಷನ್ ಕೊಟ್ಟಿದ್ದಾರೆ.

(ಗೊಂದಲ)

ಆಧ್ಯಕ್ಷರು: ಒಂದು minute ಅವರು ರೂಲ್ಸ್ ಹೇಳುತ್ತಾರಂತೆ, ಕೇಳಿ ನಾನು ನಿರ್ಣಯ ಕೊಡುತ್ತೇನೆ.

(ಗೊಂದಲ)

ಶ್ರೀ ಬಸವರಾಜ ಎಸ್ ಬೊಮ್ಮಾಯಿ: ಇವರು Zero Hour ಅನ್ನು ದುರುಪಯೋಗ ಮಾಡುತ್ತಿದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪ: Zero Hour ನಲ್ಲಿ ಈ ರೀತಿ ಉಂಟೇ?

ಶ್ರೀ ಬಸವರಾಜ್ ಎಸ್.ಬೊಮ್ಮಾಯಿ: Zero Hourನಲ್ಲಿ ಈ ರೀತಿ ಮಾಡಿದರೆ ಮಾತನಾಡಲು ಸಾಧ್ಯವಿದೆಯೇ?

ಶ್ರೀ ಸಿದ್ದರಾಮಯ್ಯ: ನಾನು ರೂಲ್ಸ್‌ನ್ನು ಓದುತ್ತೇನೆ.

ಅಧ್ಯಕ್ಷರು: ನಾನು ರೂಲ್ಸ್‌ನ್ನು ನೋಡಿದ್ದೇನೆ. ಓದುವುದಾದರೆ ಓದಿ.

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, Zero Hour ಆಯಿತು. ನೀವು ರೂಲಿಂಗ್ ಕೊಟ್ಟು ಆಯಿತು. ಮತ್ತೆ ರೂಲಿಂಗ್ ಕೊಡಿ ಎಂದು ಹೇಳುತ್ತಿದ್ದಾರೆ. Zero Hour ಆಯಿತು. ಇದರಲ್ಲಿ ಏನು ಬೇಕಾದರೂ ಪ್ರಸ್ತಾಪ ಮಾಡಬಹುದೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ: Any member..

ಅಧ್ಯಕ್ಷರು: ನಾನು ರೂಲಿಂಗ್ ಕೊಡುತ್ತೇನೆ. ನಾನು ತೀರ್ಮಾನ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಿರಲ್ಲಾ..

(ಗೊಂದಲ)

ಅಧ್ಯಕ್ಷರು: ಈಗ ತಾವೆಲ್ಲಾ ಹೇಳಿದ್ದೀರಿ, ನೀವೂ ಹೇಳಿದಿರಿ, ಅವರೂ ಹೇಳಿದರು. ಮಾನ್ಯ ವಿರೋಧ ಪಕ್ಷದ ನಾಯಕರು ತಾವೂ ಹೇಳಿದಿರಿ. ಈ ಕಡೆ ಆಡಳಿತ ಪಕ್ಷದ ಮಂತ್ರಿಗಳೂ ಹೇಳಿದ್ದಾರೆ. ಈಗಾಗಲೇ ನಾನು ರೂಲಿಂಗ್ ಕೊಟ್ಟಿದ್ದೇನೆ.

(ಗೊಂದಲ)

ಅಧ್ಯಕ್ಷರು: ಈಗಾಗಲೇ ನಾನು ರೂಲಿಂಗ್ ಕೊಟ್ಟಿದ್ದೇನೆ. ಅದನ್ನು ರಿವ್ಯೂ ಮಾಡುವುದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ವಿನಂತಿ ಮಾಡಿಕೊಂಡರು. ತಾವು ಈಗ ಆ ರೂಲನ್ನು ಓದಿ ಹೇಳಿದಿರಿ. ರೂಲ್ 361 ಇವತ್ತು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ ಅದು ಶೂನ್ಯವೇಳೆಯಲ್ಲಿ ಬರುವಂಥ ವಿಷಯ.

ಶ್ರೀ ಸಿದ್ದರಾಮಯ್ಯ: Any rule can be suspended, that is what Rule 361 says....

ಅಧ್ಯಕ್ಷರು: ಆಯಿತು. ಒಪ್ಪಿಕೊಂಡೆ. ತಾವು ರೂಲ್ 361 ಬಗ್ಗೆ ಹೇಳಿದಿರಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: You have got that power under Rule 361 you allow me under that rule.

ಅಧ್ಯಕ್ಷರು: ನಾನು ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡುತ್ತಿದ್ದೇನೆ, ತಾವು ಹೇಳಿದಿರಿ. ಆಯಿತು. ಇವತ್ತು...

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದಕ್ಕೆ ಅವರು ಹೇಳಿದರು ಯಾವ power, ಯಾವ ರೂಲ್ಸ್ ಎಂದು. You allow me under that rule. Under that rule I will submit to you. Then you take your decision.

ಅಧ್ಯಕ್ಷರು: ಆಯಿತು. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸಿದ್ದರಾಮಯ್ಯನವರು ಏನು ಸಬ್‌ಮಿಟ್ ಮಾಡಿ ಇದನ್ನು ರಿವ್ಯೂ ಮಾಡಬೇಕೆಂದು ಹೇಳಿದ್ದೀರಿ. ನಾನು ಈಗಾಗಲೆ..

(ಗೊಂದಲ)

ಅಧ್ಯಕ್ಷರು: ಒಂದು ನಿಮಿಷ.

ಶ್ರೀ ಸಿದ್ದರಾಮಯ್ಯ: ನಮ್ಮ ಮನವಿ ಈ ರೂಲ್ಸ್ ಪ್ರಕಾರ, ಆದ್ದರಿಂದ You have to take a decision. Under two provisions you can suspend. You have got powers.....

ಅಧ್ಯಕ್ಷರು: Ok. ನೀವು ಸಬ್‌ಮಿಷನ್ ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ: Any rule can be suspended by the speaker……You allow him to make a statement.

ಒಬ್ಬ ಮಾನ್ಯ ಸದಸ್ಯರು: There is no provision for further discussion. ನಮ್ಮ ಸಬ್‌ಮಿಷನ್‌ನ್ನು ಕೇಳಿ.

(ಗೊಂದಲ)

ಶ್ರೀ ಬಿ.ಎನ್.ಬಚ್ಚೇಗೌಡ: ಅವರು ಶೂನ್ಯ ವೇಳೆಯಲ್ಲಿ ನೋಟಿಸ್ ಆನ್ನು ಕೊಟ್ಟಿದ್ದಾರೆ. ಆದ್ದರಿಂದ ಇವರು ಮಾತನಾಡಲು ಹೇಗೆ ಆಗುತ್ತದೆ. ಯಾರು Zero Hour ನಲ್ಲಿ ನೋಟಿಸ್ ಕೊಟ್ಟಿದ್ದಾರೆ ಅವರು ಮಾತನಾಡಲಿ.

(ಗೊಂದಲ)

ಅಧ್ಯಕ್ಷರು: ಬಚ್ಚೇಗೌಡರೆ ನಾನು conclude ಮಾಡುತ್ತೇನೆ. ನಾನು final ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು: I will conclude.

(ಗೊಂದಲ)

ಅಧ್ಯಕ್ಷರು: ಈಶ್ವರಪ್ಪನವರೆ, ಬಚ್ಚೇಗೌಡರೆ ಒಂದು ನಿಮಿಷ ಕುಳಿತುಕೊಳ್ಳಿ. ಆಯಿತು. ನೀವು ರೂಲ್ ಆನ್ನು ಹೇಳಿದ್ದೀರಿ. Suspension ಮಾಡುವಂಥ power ಇದೆಯೆನ್ನುವ ಮಾತನ್ನು ಹೇಳಿದ್ದೀರಿ. I heard. ನಾನು ಇದನ್ನು ಈಗ conclude ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ:– Please, exercise that power….

ಅಧ್ಯಕ್ಷರು: Yes. ನೀವು ಹೇಳಿದಿರಲ್ಲ. Ok. ಒಂದು ನಾನು ಹೇಳುತೇನೆ. ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು, ಸಿದ್ದರಾಮಯ್ಯನವರು ಮತ್ತು ಈ ಕಡೆ ಸಚಿವರು ಹಾಗೂ ಇನ್ನಿತರೆ ಶಾಸಕರು ಈ ವಿಚಾರದ ಬಗ್ಗೆ ಹೇಳಿದರು. ಒಂದು ಸಲ ನಾನು Speaker ಆಗಿ ರೂಲಿಂಗ್ ಕೊಟ್ಟಮೇಲೆ ಅದನ್ನು ರಿವ್ಯೂ ಮಾಡಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು application ಕೊಟ್ಟಿದ್ದಾರೆ. ಅದರ ಬಗ್ಗೆ ರೂಲ್ 361 ಅನ್ನು mention ಮಾಡಿ Speakerಗೆ…361 suspension of Rules… ಆ ಎರಡೂ ರೂಲ್ಸ್ ಪ್ರಕಾರ ಇವತ್ತು ಎಲ್ಲಾ ರೂಲ್ಸನ್ನು Suspension ಮಾಡಿ Speaker ಮತ್ತೆ ಹೊಸದಾಗಿ ರಿವ್ಯೂ ಮಾಡಬಹುದು ಎಂಬ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. ಇಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಲು ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದ್ದು Zero Hour ನಲ್ಲಿ. ಆ Zero Hour

ಯಾವುದೇ ರೂಲ್‌ನಲ್ಲಿ ಬರುವುದಿಲ್ಲ. In the Lok Sabha Zero Hour poceedings are allowed as a matter of convention not sanctioned by any rule of the House. So, ಯಾವುದೇ ರೂಲ್ ಪ್ರಕಾರ ಅದು Zero Hourಗೆ ಇರುವಂಥದ್ದಲ್ಲ. ಹೀಗಾಗಿ, ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ, ಇವತ್ತೇನು 361 ಮತ್ತು 362 ರೂಲ್ಸನ್ನು mention ಮಾಡಿದ್ದೀರಿ ಈ Zero Hour ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅದು apply ಆಗುವುದಿಲ್ಲ. ಈಗಾಗಲೇ ನಾನೇನು ರೂಲಿಂಗ್ ಆನ್ನು ಕೊಟ್ಟಿದ್ದೇನೆ ಅದರ ಪ್ರಕಾರ ಈ ವಿಷಯವನ್ನು ಇಲ್ಲಿಗೇ ಮುಕ್ತಾಯ ಮಾಡೋಣ

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದು ಅನ್ಯಾಯವಾಗುತ್ತದೆ. Sir, ಆದ್ದರಿಂದ ನಾನು ನಿಮಗೆ ಏನು ಹೇಳಿದೆ, ರೂಲ್ 361 ತಾವು invoke ಮಾಡಿ..

(ಗೊಂದಲ)

ಶ್ರೀ ಬಿ.ಎನ್.ಬಚ್ಚೇಗೌಡ: ಇದು ಎರಡನೆ ಬಾರಿ ಆಯಿತು.

ಶ್ರೀ ಬಸವರಾಜ್ ಎಸ್ ಬೊಮ್ಮಾಯಿ: Are you questioning the ruling of the Chair?

ಶ್ರೀ ಮಲ್ಲಿಕಾರ್ಜುನ ಖರ್ಗೆ:Sir, ನಾನು ನಿಮ್ಮ ಹತ್ತಿರ ಮಾತನಾಡುತ್ತಿದ್ದೇನೆ.

(ಗೊಂದಲ)

ಶ್ರೀ ಬಸವರಾಜ್ ಎಸ್.ಬೊಮ್ಮಾಯಿ:Are you questioning the ruling of the Chair? ನಾನು ನಿಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಕೇಳುತ್ತಿದ್ದೇನೆ. ಅವರು ನಿಮ್ಮ ರೂಲಿಂಗ್‌ನ್ನು questioning ಮಾಡುತ್ತಿದ್ದಾರೆಯೇ?

ಶ್ರೀ ಕೆ.ಎಸ್.ಈಶ್ವರಪ್ಪ: ಪುನರ್‌ಪರಿಶೀಲನೆ ಮಾಡಿದ್ದು ಮುಗಿಯಿತು ಎಂದು ಹೇಳಿದ ಮೇಲೆ ಮಾಡುತ್ತಾರೆಯೇ? ಈಗ ತಾವು ಹೇಳಿ ಆಯಿತಲ್ಲಾ. ಅದನ್ನೇ ಮತ್ತೆ ಮತ್ತೆ ಪರಿಶೀಲನೆ ಮಾಡಬೇಕೆಂದು ಕೇಳುವುದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇವರು ಯಾರು ಮಧ್ಯದಲ್ಲಿ ಬರುವುದಕ್ಕೆ?

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ: ಅವರು ಮರುಪರಿಶೀಲನೆಗೆ ಕೇಳುತ್ತಲೇ ಇರಲಿ ನೀವು ರೂಲಿಂಗ್ ಕೊಡುತ್ತಲೇ ಇರುವುದು ಹೊಸ ಸಂಪ್ರದಾಯವಾಗಲಿ!

(ಗೊಂದಲ)

ಅಧ್ಯಕ್ಷರು: ಈ ವಿಷಯಕ್ಕೆ ಚರ್ಚೆಯನ್ನು ಮುಕ್ತಾಯಗೊಳಿಸಿದ್ದೇನೆ. ಮುಂದೆ ಬಜೆಟ್ ಬಗ್ಗೆ ಮಾನ್ಯ ಸದಸ್ಯರು ಮಾತನಾಡಬಹುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದು ಅನ್ಯಾಯವಾಗುತ್ತದೆ.

(ಗೊಂದಲ)

ಅಧ್ಯಕ್ಷರು:ಮಾನ್ಯ ವಿರೋಧ ಪಕ್ಷದ ನಾಯಕರೆ, ಇದರ ಬಗ್ಗೆ ಸಾಕಷ್ಟು ಚರ್ಚೆಯಾಯಿತು. ಇದನ್ನು ಮುಕ್ತಾಯಗೊಳಿಸೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ: No. No. ಸಬ್‌ಮಿಷನ್ ಮಾಡಲು ಅವಕಾಶ ಇಲ್ಲ ಎಂದರೆ ಹೇಗೆ?

ಅಧ್ಯಕ್ಷರು: ಆಯಿತು. ಮಾನ್ಯ ವಿರೋಧ ಪಕ್ಷದ ನಾಯಕರು ನೀವು ಹೇಳಿದಿರಿ. ಸಾಕಷ್ಟು ವಿಷಯವನ್ನು ಪ್ರಸ್ತಾಪ ಮಾಡಿದಿರಿ. ಈಗ ಇದು ಸಾಕು. ಮುಂದಿನ businessಗೆ ಅವಕಾಶ ಮಾಡಿ ಕೊಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಕೇಳಲು ನನಗೆ ಹಕ್ಕು ಇದೆಯೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು: ದಯಮಾಡಿ ಮುಂದಿನ businessಗೆ ಅವಕಾಶ ಕೊಡಿ. It is my request. ಮಾನ್ಯ ವಿರೋಧಪಕ್ಷದ ನಾಯಕರು ತಾವೇನು ಪ್ರಸ್ತಾಪ ಮಾಡಿದ್ದೀರಿ, ಅನಂತರ ನಾನು ರೂಲಿಂಗ್ ಸಹ ಕೊಟ್ಟಿದ್ದೇನೆ. ರಿವ್ಯೂ application ಕೊಟ್ಟಿದ್ದೀರಿ. ಅದರ ಬಗ್ಗೆಯೂ ಆಯಿತು. ಇದನ್ನು ಇಲ್ಲಿಗೆ conclude ಮಾಡಿಬಿಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾವು ದಯಮಾಡಿ ಇದನ್ನು bulldoze ಮಾಡಬೇಡಿ.

ಅಧ್ಯಕ್ಷರು: ನಿಮಗೆ ಯಾವಾಗಲೂ ಎಂದೂ bulldoze ಮಾಡುವ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರು ಹೇಳುತ್ತಾರೆಂದು bulldoze ಮಾಡುವುದಕ್ಕೆ ಹೋಗಬೇಡಿ.

ಅಧ್ಯಕ್ಷರು: ಇಲ್ಲ. Bulldoze ಮಾಡುವ ಪ್ರಶ್ನೆಯೇ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ರೂಲ್ 361ರ ಕೆಳಗೆ ತಾವು suspend ಮಾಡಿ ಇದನ್ನು ಕೇಳಿ ಅನಂತರ ಬೇಕಾದರೆ reject ಮಾಡಿ.

ಅಧ್ಯಕ್ಷರು: ನಾನು ಈಗಾಗಲೇ ಇದರ ಬಗ್ಗೆ decision ಕೊಟ್ಟಿದ್ದೇನೆ. ಆದ್ದರಿಂದ ಇದನ್ನು ಇಲ್ಲಿಗೆ conclude ಮಾಡಿ ಮುಂದಿನ proceedings ಅನ್ನು ನಡೆಸೋಣ ದಯಮಾಡಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಮ್ಮ ತೇಜೋವಧೆ ಮಾಡಿ...

ಅಧ್ಯಕ್ಷರು: ಇಲ್ಲ. ಇಲ್ಲಿಗೆ ಇದನ್ನು conclude ಮಾಡೋಣ.

(ಗೊಂದಲ)

ಅಧ್ಯಕ್ಷರು: ನಾನು ಈಗಾಗಲೇ ಇದರ ಬಗ್ಗೆ ರೂಲಿಂಗ್ ಕೊಟ್ಟಿದ್ದೇನೆ. ದಯಮಾಡಿ ಇದನ್ನು ಇಲ್ಲಿಗೆ conclude ಮಾಡಿ.

ಒಬ್ಬ ಮಾನ್ಯ ಸದಸ್ಯರು: ಬಜೆಟ್ ಬಗ್ಗೆ ಮೇಡಂರವರು ಮಾತನಾಡುತ್ತಿದ್ದಾರೆ. ಅವರಿಗೆ ದಯಮಾಡಿ ಅವಕಾಶ ಮಾಡಿಕೊಡಬೇಕು.

(ಗೊಂದಲ)

ಅಧ್ಯಕ್ಷರು: ಈಗಾಗಲೇ ಎಲ್ಲವನ್ನು ಮಾತನಾಡಿದ್ದೀರಿ. ಮತ್ತೆ ಏಕೆ? ವಿಷಯ ಪ್ರಸ್ತಾಪವಾಗಿದೆ, ರೂಲಿಂಗ್ ಕೂಡ ಆಗಿದೆ. ಆದ್ದರಿಂದ ಇದರ ಬಗ್ಗೆ further discussion ಇಲ್ಲ. ಸಾಕು ಇದನ್ನು close ಮಾಡಿಬಿಡಿ.

ಶ್ರೀ ಸಿದ್ದುಸಾವದಿ: ಇದು ಮುಗಿದುಹೋದ ವಿಷಯ. ಆದ್ದರಿಂದ ಮಹಿಳೆಯರಿಗೆ ಬಜೆಟ್ ಮೇಲೆ ಮಾತನಾಡಲು ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರು ಬಾಯಿಗೆ ಬಂದಂತೆ ಮಾತನಾಡಿದರೆ ನಾವೂ ಉತ್ತರ ಕೊಡಬೇಕಾಗುತ್ತದೆ. ಅನಂತರ ಅವರು ಕಾಂಗ್ರೆಸ್ ಪಕ್ಷಕ್ಕೆ ಮಸಿಬಳಿಯುತಿದ್ದಾರೆ.

ಅಧ್ಯಕ್ಷರು: ನೀವು ಹೇಳುವುದನ್ನೆಲ್ಲಾ ಹೇಳಿಬಿಟ್ಟಿದ್ದೀರಿ. We have to conclude it.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಈ ರೀತಿಯಾಗಿ ಅವರ ಪಕ್ಷದ ಒಬ್ಬ ಮುಖಂಡರು ಹೇಳಿದ್ದಾರೆ. ಅದಕ್ಕಾಗಿ ಇದರ ಬಗ್ಗೆ ನಾವು ಮಾತನಾಡುವುದಕ್ಕೆ ದಯವಿಟ್ಟು ಅವಕಾಶ ಕೊಡಬೇಕು. ಇದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು:– ಈ ವಿಷಯವನ್ನು ಇಲ್ಲಿಗೆ ಮುಗಿಸೋಣ. ಇನ್ನು ಸಾಕಷ್ಟು ಜನ ಸದಸ್ಯರು ಬಜೆಟ್ ಮೇಲೆ ಚರ್ಚೆ ಮಾಡುವವರಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರೆ, ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಇದನ್ನು ಇಲ್ಲಿಗೆ ಮುಗಿಸೋಣ. ದಯವಿಟ್ಟು ಬೇರೆಯವರಿಗೆ ಅವಕಾಶ ಮಾಡಿಕೊಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:– ಯಾವುದು?

(ಗೊಂದಲ)

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದು ಪ್ರತಿಭಟನೆ ಮಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು:– ಮಾನ್ಯ ಸದಸ್ಯರೆಲ್ಲರೂ ತಮ್ಮ ಸ್ಥಾನಕ್ಕೆ ಹೋಗಿ. Xxx ದಯವಿಟ್ಟು ತಮ್ಮ ಸ್ಥಳಗಳಿಗೆ ಹೋಗಿ. ಬಜೆಟ್ ಮೇಲೆ ಚರ್ಚೆಯನ್ನು ಮುಂದುವರಿಸೋಣ. ನನ್ನ ರಿಕ್ವೆಸ್ಟ್ ಏನೆಂದರೆ, ಈಗ ಆಯವ್ಯಯದ ಮೇಲೆ ಚರ್ಚೆ ಮುಂದುವರಿಸಬೇಕಾಗಿದೆ. ಮತ್ತೆ ಇನ್ನೂ ಸಾಕಷ್ಟು ಜನ ಸದಸ್ಯರು ಈ ಬಜೆಟ್‌ಮೇಲೆ

ಚರ್ಚೆ ಮಾಡುವವರಿದ್ದಾರೆ. ಆದ್ದರಿಂದ, ತಾವುಗಳು ದಯವಿಟ್ಟು ತಮ್ಮ ಸ್ಥಳಕ್ಕೆ ಹೋಗಿ. ಈ ಬಜೆಟ್ ಮೇಲೆ ಚರ್ಚೆ ಮಾಡುವುದಕ್ಕೆ ತಮಗೆಲ್ಲಾ ಅವಕಾಶ ಕೊಡುತ್ತೇನೆ. ದಯವಿಟ್ಟು ಬಜೆಟ್ ಮೇಲೆ ಚರ್ಚೆ ಮಾಡಿ. ಯಾರು ಆ ಪದವನ್ನು ಪ್ರಯೋಗ ಮಾಡಿದ್ದಾರೆಯೋ ಆ ಪದವನ್ನು ನಾನು ಕಡತದಿಂದ ತೆಗೆದು ಹಾಕಿದ್ದೇನೆ. ನಿಮಗೆ ಅವಕಾಶ ಕೊಡುತ್ತೇನೆ. ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ ಬಜೆಟ್ ಮೇಲೆ ಚರ್ಚೆಯನ್ನು ಮುಂದುವರಿಸಿ. ಏಕೆಂದರೆ, ನಾಳೆ ದಿವಸ ಸರ್ಕಾರದಿಂದ ಬಜೆಟ್ ಮೇಲೆ ಉತ್ತರ ಇದೆ. ಆದ್ದರಿಂದ, ನಾಳೆ ಬೆಳಿಗ್ಗೆ ಮತ್ತೆ ಬಜೆಟ್ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ನಾನು ಕೊನೆಯದಾಗಿ ರಿಕ್ವೆಸ್ಟ್ ಮಾಡುವುದೇನೆಂದರೆ, ದಯವಿಟ್ಟು ತಾವುಗಳು ತಮ್ಮ ಸ್ಥಾನಕ್ಕೆ ಹೋಗಿ. ಬಜೆಟ್ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ಇನ್ನು ಬಹಳಷ್ಟು ಜನ ಸದಸ್ಯರು ಮಾತನಾಡುವವರಿದ್ದಾರೆ. ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ ಈ ಒಂದು ಪ್ರೊಸೀಡಿಂಗ್ಸ್ ನಡೆಸುವುದಕ್ಕೆ ಅವಕಾಶ ಕೊಡಿ. ಇಲ್ಲದಿದ್ದರೆ, ಅನಿವಾರ್ಯವಾಗಿ ಸಭೆಯನ್ನು ನಾನು ಬೆಳಿಗ್ಗೆಗೆ ಮುಂದಕ್ಕೆ ಹಾಕಬೇಕಾಗುತ್ತದೆ. ಎಲ್ಲರೂ ತಮ್ಮ ಸ್ಥಾನಗಳಿಗೆ ಹೋಗಿ. ಈಗಾಗಲೇ ಪದ ಪ್ರಯೋಗ ಮಾಡಿರತಕ್ಕಂಥವೆಲ್ಲವನ್ನೂ ನಾನು ಕಡತದಿಂದ ತೆಗೆದು ಹಾಕಿದ್ದೇನೆ. ತಮ್ಮ ಸ್ಥಾನಗಳಿಗೆ ಹೋಗಿ ಎಂದು ನಾನು ಕೊನೆಯದಾಗಿ ಹೇಳುತ್ತಿದ್ದೇನೆ. ನೀವು ಹೋಗದಿದ್ದರೆ ಈ ಬಜೆಟ್ ಮೇಲೆ ಮಾತನಾಡತಕ್ಕಂಥ ಅವಕಾಶವನ್ನು ನೀವು ಕಳೆದುಕೊಳ್ಳುತ್ತೀರಿ. ಇದಕ್ಕೆ ಯಾರೂ ಕೂಡ ಜವಾಬ್ದಾರಿಯಿಲ್ಲ. ಈಗ ಬಜೆಟ್ ಮೇಲೆ ಮಾತನಾಡುವುದಕ್ಕೆ ನೀವುಗಳು ತಯಾರಿದ್ದರೆ ಮಾತನಾಡುವುದಕ್ಕೆ ನಾನು ಅವಕಾಶ ಕೊಡುವುದಕ್ಕೆ ತಯಾರಿದ್ದೇನೆ. ದಯವಿಟ್ಟು ನಿಮ್ಮಗಳ ಸ್ಥಾನಕ್ಕೆ ಹೋಗಿ. ನಾಳೆ ಸರ್ಕಾರದಿಂದ ಉತ್ತರ ಇದೆ. ನಾಳೆ ಬೆಳಿಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ಬಜೆಟ್ ಮೇಲೆ ಉತ್ತರವನ್ನು ಕೊಡುತ್ತಾರೆ. ಈಗ ಸದನವನ್ನು ಬೆಳಿಗ್ಗೆ 10.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ರಾತ್ರಿ 7 ಗಂಟೆ 15 ನಿಮಿಷಕ್ಕೆ ಮುಕ್ತಾಯಗೊಂಡು ದಿನಾಂಕ 30.07.2008ರಂದು ಬುಧವಾರ ಬೆಳಿಗ್ಗೆ 10.30 ಗಂಟೆಗೆ ಸೇರಲು ಸಭೆಯು ನಿಶ್ಚಯಿಸಿತು)